ಅಂಕೋಲ ತಾಲ್ಲೂಕಿನಲ್ಲಿ ಭಾಗ್ಯಜ್ಯೋತಿ ಯೋಜನೆಯಂ ಕಾರ್ಯಗತ

೬೯. ಶ್ರೀ ಉಮೇಶ್ ಭಟ್ (ಅಂಕೋಲಾ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆ ಅಂಕೋಲ ತಾಲ್ಲೂಕಿನಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಎಷ್ಟು ಮನೆಗಳಿಗೆ ದೀಪಗಳನ್ನು ಒದಗಿಸಲಾಗಿದೆ;

ಆ) ಈ ಯೋಜನೆಯನ್ನು ಜಾರಿಗೊಳಿಸುವಾಗ ಅಂಕೋಲಾದಲ್ಲಿ ರಾಜಕೀಯ ಪಕ್ಷಪಾತ ನಡೆದಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಇಲ್ಲದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೂಲಂಕುಷ ತನಿಖೆ ನಡೆಸಿ ಅರ್ಹತೆಯುಳ್ಳ ಎಲ್ಲಾ ಕುಟುಂಬಗಳಿಗೆ ದೀಪ ಒದಗಿಸುವ ಕೆಲಸವನ್ನು ಸರ್ಕಾರ ತ್ವರಿತವಾಗಿ ಮಾಡುತ್ತದೆಯೇ ಹಾಗೂ ಇದನ್ನು ಎಷ್ಟು ಸಮಯದಲ್ಲಿ ಮಾಡಲಾಗುವುದು ;

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

ಅ) ೧೨೬೭ ಮನೆಗಳು (೩೧–೩–೧೯೯೦ರ ಅಂತ್ಯದ ವೇಳೆಗೆ)

ಆ) ಇಲ್ಲ.

ಇ) 'ಅ' ನಲ್ಲಿನ ಉತ್ತರದಿಂದ ತನಿಖೆ ನಡೆಸುವ ವಿಚಾರ ಉದ್ಭವಿಸುವುದಿಲ್ಲ.

ಮುಂಡರಗಿ ತಾಲ್ಲೂಕಿನ ರೇಷ್ಮೆ ಫಾರಂ

೬೧. ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಂಡರಗಿ ತಾಲ್ಲೂಕಿನಲ್ಲಿ ರೇಷ್ಮೆ ಫಾರಂ ಇರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ ?

ಆ) ಇಲ್ಲಿಯವರೆಗೆ ರೇಷ್ಮೆ ಫಾರಂಗೆ ನೀರಿನ ಕೊರತೆ ಆದದ್ದು ಸರ್ಕಾರದ ಗಮನಕ್ಕೆ ಬರದಿರಲು ಕಾರಣಗಳೇನು ?

ಇ) ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು).—

ಅ) ತಿಳಿದಿದೆ.

ಆ) ಗಮನಕ್ಕೆ ಬಂದಿದೆ.

ಇ) ಧಾರವಾಡ ಜಿಲ್ಲಾ ಪರಿಷತ್ತು ಯೋಜನೆ ಅಡಿಯಲ್ಲಿ ಕೊಳವೆ ಬಾವಿಗಳನ್ನು ಇನ್ನು ಆಳಕ್ಕೆ ಇಳಿಸಲು ಹಾಗೂ ಹೊಸದಾಗಿ ಬೇರೆ ಸ್ಥಳಗಳನ್ನು ಆಯ್ಕೆ ಮಾಡಿ ಕೊಳವೆ ಬಾವಿ ತೆಗೆದು ಪಂಪು ಅಳವಡಿಸಲು ಕಾರ್ಯಕ್ರಮ ಹಾಕಿಕೊಂಡಿದೆ. ಇವುಗಳನ್ನು ಬೇಗನೆ ಕಾರ್ಯಗತ ಮಾಡಲಾಗುವುದು.

ಕಪ್ಪು ಹಲಗೆ ಯೋಜನೆ ಅಡಿ ಪ್ರಾರಂಭವಾದ ಶಾಲಾ ಕಟ್ಟಡಗಳು

೫೮. ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಕಪ್ಪು ಹಲಗೆ ಯೋಜನೆ ಅಡಿ ಪ್ರಾರಂಭವಾದ ಕಟ್ಟಡಗಳಲ್ಲಿ ಅಪೂರ್ಣ ಹಂತಕ್ಕೆ ನಿಂತ ಶಾಲಾ ಕಟ್ಟಡಗಳು ಯಾವುವು, ಅರ್ಧಕ್ಕೆ ನಿಲ್ಲಲು ಕಾರಣಗಳೇನು ? ಇವುಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮಗಳೇನು ?

ಆ) ಮುಂಡರಗಿ ನಗರಸಭೆ ಹದ್ದಿನಲ್ಲಿಯ ಶಾಲೆಗಳ ಕೊಠಡಿಗಳ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮ ಗಳೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಮುಂಡರಗಿ ತಾಲ್ಲೂಕಿನಲ್ಲಿ ಕಪ್ಪ ಹಲಗೆ ಯೋಜನೆಯಡಿಯಲ್ಲಿ ಪ್ರಾರಂಭಿಸಲಾದ ಶಾಲಾ ಕೊಠಡಿಗಳು.

ಒಂದು ಕೊಠಡಿಗಳು	—	೨೭
ಎರಡು ಕೊಠಡಿಗಳು	—	೦೬
ಒಟ್ಟು	—	೩೯

ಅಪೂರ್ಣ ಹಂತಕ್ಕೆ ನಿಂತಿರುವ ಕಟ್ಟಡಗಳು — ೩೯

ಅರ್ಧಕ್ಕೆ ನಿಲ್ಲಲು ಕಾರಣಗಳು :

ಇದಕ್ಕೆ ಸಂಬಂಧಿಸಿದಂತೆ ೧೧.೭೦ ಲಕ್ಷ ರೂಪಾಯಿಗಳನ್ನು ಎನ್.ಆರ್.ಇ.ಪಿ. ಯಲ್ಲಿ ಬಿಡುಗಡೆ ಮಾಡಿದ್ದು, ಅದು ಸಾಕಾಗದಿರುವುದು.

ಪೂರ್ತಿಗೊಳಿಸಲು ಸರ್ಕಾರದ ಕ್ರಮ :

ಈಗ ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು ಇನ್ನಾವುದೇ ಮೂಲದಿಂದ/ಉಳಿತಾಯದಿಂದ ಹಣವನ್ನು ಈ ಕಾರ್ಯಕ್ಕೆ ಒದಗಿಸಿ ಕಾರ್ಯವನ್ನು ಪೂರ್ಣಗೊಳಿಸಲು ಜಿಲ್ಲಾ ಪರಿಷತ್ತು ಧಾರವಾಡ ಇವರಿಗೆ ಸೂಚಿಸಲಾಗುವುದು.

ಆ) ಬಂದಿದೆ.

ಇ) ಧಾರವಾಡ ಜಿಲ್ಲೆಗೆ ನೀಡಿದ ಆರ್ಥಿಕ ಆಯೋಗ ನೀಡಿದ ಆನುದಾನದಲ್ಲಿ ನಗರ ಪ್ರದೇಶದಲ್ಲಿನ ಶಾಲಾ ಕೊಠಡಿಗಳ ನಿರ್ಮಾಣಕ್ಕೆಂದು ೨೪.೫೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿ ಮುಂಡರಗಿ ತಾಲ್ಲೂಕಿನ ಎರಡು ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿ ಕೊಂಡಿದ್ದು, ಸದರಿ ನಿರ್ಮಾಣ ಕಾರ್ಯವು ಭೂಸೇನಾ ನಿಗಮದವರಿಗೆ ವಹಿಸಿಕೊಡಲಾಗಿದೆ ಮತ್ತು ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ಮುಂಡರಗಿ ತಾಲ್ಲೂಕಿನಲ್ಲಿಯ ಏತ ನೀರಾವರಿ ಬಗ್ಗೆ

*೫೯. ಶ್ರೀ ಕೆ. ಪೆಜ್. ಕಾರಡಗಿ (ಮುಂಡರಗಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಂಡರಗಿ ತಾಲ್ಲೂಕಿನ ಕಕ್ಕೂರ್ ಏತ ನೀರಾವರಿ ಎರಡನೆಯ ಹಂತ ಹಾಗೂ ಸಿಂಗಟಾಲೂರಿನ ಏತ ನೀರಾವರಿಯ ಎರಡನೆಯ ಹಂತ ಯಾವಾಗ ಪ್ರಾರಂಭವಾಗುತ್ತವೆ. ಇಲ್ಲಿಯ ಸದ್ಯದ ನೀರೆತ್ತುವ ಪಂಪುಗಳು ಸರಿಯಾಗಿ ನೀರೆತ್ತದಿರುವುದಕ್ಕೆ ಕಾರಣಗಳೇನು, ಸರ್ಕಾರ ಈ ನಿಟ್ಟಿನಲ್ಲಿ ತೆಗೆದುಕೊಂಡ ಕ್ರಮಗಳೇನು ?

ಆ) ಮುಂಡರಗಿ ತಾಲ್ಲೂಕಿನಲ್ಲಿ ಹೊಸದಾಗಿ ರಾಟಿ ಹಾಗೂ ಅಡವಿ ಹನಮಪ್ಪ ಸ್ಥಳಗಳಲ್ಲಿ ಸರ್ಕಾರ ಎಂದಿನಿಂದ ಏತ ನೀರಾವರಿ ಯೋಜನೆಯನ್ನು ಪ್ರಾರಂಭಿಸಲಾಗುವುದು. ಹಾಗೂ ಇಲ್ಲಿಯವರೆಗೆ ಏತ ನೀರಾವರಿ ಯೋಜನೆಯನ್ನು ಪ್ರಾರಂಭಿಸದಿರಲು ಕಾರಣಗಳೇನು ?

ಇ) ಮುಂಡರಗಿ ತಾಲ್ಲೂಕಿನಲ್ಲಿಯೂ ಅಲೂರ, ಸಿಂಗಟಾಲೂರು, ಡಂಬಳಗಳಲ್ಲಿಯ ನೀರಾವರಿಯ ಕೆರೆಗಳನ್ನು ಹೂಳೆತ್ತುವ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಯೋಜನೆ ಸರ್ಕಾರಕ್ಕೆ ಇದಯೇ, ಈ ಕಾರ್ಯವನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು ?